ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-6, May – June 2026, Pp. 54-65
©*IIMRD*, Mysuru
IIMRD JOURNALS
www.iimrd.com

# ಪ್ರಾತಿನಿಧಿಕ ಆಯ್ದ ಕಥಾ ಸಾಹಿತ್ಯದಲ್ಲಿ ಬಡತನದ ನಿರೂಪಣಾ ನೆಲೆಗಳ ವಿಶ್ಲೇಷಣೆ

**ಡಾ. ಮಾರುತಿ ಬಿ.ಕೆ.**
ಅತಿಥಿ ಉಪನ್ಯಾಸಕರು, ದಾವಣಗೆರೆ ವಿಶ್ವವಿದ್ಯಾನಿಲಯ ಘಟಕ ಕಾಲೇಜು, ತುರುವನೂರು.

**ಸಾರಾಂಶ: (Abstract)**

*ಪ್ರಾತಿನಿಧಿಕ ಆಯ್ದ ಕಥಾ ಸಾಹಿತ್ಯದಲ್ಲಿ ಬಡತನವು ಕೇವಲ ಆರ್ಥಿಕ ಕೊರತೆಯಾಗಿ ಮಾತ್ರವಲ್ಲದೆ, ಸಾಮಾಜಿಕ ಅಸಮಾನತೆ, ಶೋಷಣೆ, ಹಸಿವು ಮತ್ತು ಮಾನವೀಯ ಸಂಕಷ್ಟಗಳ ಪ್ರತೀಕವಾಗಿ ಚಿತ್ರಿತವಾಗಿದೆ. ಈ ಅಧ್ಯಯನವು ಆಯ್ದ ಕನ್ನಡ ಕಥೆಗಳ ಮೂಲಕ ಬಡತನದ ವಿವಿಧ ನಿರೂಪಣಾ ನೆಲೆಗಳನ್ನು ವಿಶ್ಲೇಷಿಸುತ್ತದೆ. ಕಥೆಗಾರರು ಬಡತನದ ಪರಿಣಾಮವಾಗಿ ವ್ಯಕ್ತಿ ಮತ್ತು ಕುಟುಂಬದ ಜೀವನದಲ್ಲಿ ಉಂಟಾಗುವ ಮಾನಸಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದಲಾವಣೆಗಳನ್ನು ಪರಿಣಾಮಕಾರಿಯಾಗಿ ಬಿಂಬಿಸಿರುವುದನ್ನು ಈ ಲೇಖನ ಪರಿಶೀಲಿಸುತ್ತದೆ. ಸಾಹಿತ್ಯದಲ್ಲಿ ಬಡತನದ ಚಿತ್ರಣವು ಸಾಮಾಜಿಕ ವಾಸ್ತವತೆಯನ್ನು ಅನಾವರಣಗೊಳಿಸುವ ಪ್ರಮುಖ ಸಾಧನವಾಗಿರುವುದನ್ನು ಅಧ್ಯಯನವು ಒತ್ತಿಹೇಳುತ್ತದೆ. ಈ ಸಂಶೋಧನೆಯು ಕಥಾ ಸಾಹಿತ್ಯದಲ್ಲಿನ ಬಡತನದ ನಿರೂಪಣೆಯ ವೈಶಿಷ್ಟ್ಯ ಹಾಗೂ ಅದರ ಸಾಮಾಜಿಕ ಪ್ರಸ್ತುತತೆಯನ್ನು ಗುರುತಿಸುತ್ತದೆ.*

**ಮುಖ್ಯಪದಗಳು (Keywords):** *ಬಡತನ, ಕಥಾ ಸಾಹಿತ್ಯ, ಸಾಮಾಜಿಕ ವಾಸ್ತವತೆ, ನಿರೂಪಣಾ ನೆಲೆಗಳು, ಶೋಷಣೆ.*

## ಪೀಠಿಕೆ

ಸಾಹಿತ್ಯವು ಸಮಾಜದ ಕನ್ನಡಿಯಾಗಿದ್ದು, ಸಮಾಜದಲ್ಲಿನ ಜೀವನ ವಾಸ್ತವಗಳನ್ನು ಕಲಾತ್ಮಕವಾಗಿ ಪ್ರತಿಬಿಂಬಿಸುವ ಶಕ್ತಿಯುತ ಮಾಧ್ಯಮವಾಗಿದೆ. ಮಾನವನ ಬದುಕಿನ ಸುಖ–ದುಃಖ, ಶೋಷಣೆ, ಅಸಮಾನತೆ, ಹೋರಾಟ ಹಾಗೂ ಸಾಮಾಜಿಕ ವೈಪರೀತ್ಯಗಳನ್ನು ಸಾಹಿತ್ಯವು ತನ್ನ ವಿವಿಧ ಪ್ರಕಾರಗಳ ಮೂಲಕ ದಾಖಲಿಸುತ್ತದೆ. ಅವುಗಳಲ್ಲಿ ಕಥಾ ಸಾಹಿತ್ಯವು ಸಾಮಾನ್ಯ ಜನರ ಬದುಕಿನ ಅನುಭವಗಳನ್ನು ಅತ್ಯಂತ ನೈಜವಾಗಿ ಚಿತ್ರಿಸುವ ಪ್ರಮುಖ ಸಾಹಿತ್ಯ ಪ್ರಕಾರವಾಗಿದೆ. ವಿಶೇಷವಾಗಿ ಬಡತನದಂತಹ ಸಾಮಾಜಿಕ ಸಮಸ್ಯೆಯನ್ನು ಕಥೆಗಾರರು ತಮ್ಮ ಕಥೆಗಳ ಮೂಲಕ ಮಾನವೀಯ ನೆಲೆಯಲ್ಲಿ ನಿರೂಪಿಸಿ, ಅದರ ವಿವಿಧ ಆಯಾಮಗಳನ್ನು ಓದುಗರ ಮುಂದಿಡುತ್ತಾರೆ.

ಬಡತನವು ಕೇವಲ ಆರ್ಥಿಕ ಕೊರತೆಯಲ್ಲ; ಅದು ಶಿಕ್ಷಣ, ಆರೋಗ್ಯ, ಉದ್ಯೋಗ, ಸಾಮಾಜಿಕ ಗೌರವ, ಜೀವನಮಟ್ಟ ಹಾಗೂ ಅವಕಾಶಗಳ ಕೊರತೆಯೊಂದಿಗೆ ಸಂಬಂಧ ಹೊಂದಿರುವ ಬಹುಮುಖ

*Please cite this article as:* ಮಾರುತಿ, ಬಿ.ಕೆ. (2026). ಪ್ರಾತಿನಿಧಿಕ ಆಯ್ದ ಕಥಾ ಸಾಹಿತ್ಯದಲ್ಲಿ ಬಡತನದ ನಿರೂಪಣಾ ನೆಲೆಗಳ ವಿಶ್ಲೇಷಣೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(6). ಪು.ಸಂ.* 54–65

ಸಾಮಾಜಿಕ ಸಮಸ್ಯೆಯಾಗಿದೆ. ಬಡತನದಿಂದ ವ್ಯಕ್ತಿಯ ಜೀವನದಲ್ಲಿ ಉಂಟಾಗುವ ಸಂಕಷ್ಟಗಳು, ಕುಟುಂಬದ ಅಸ್ಥಿರತೆ, ಸಾಮಾಜಿಕ ಶೋಷಣೆ, ಹಸಿವು, ನಿರುದ್ಯೋಗ, ಸಾಲದ ಹೊರೆ ಹಾಗೂ ಮಾನಸಿಕ ನೋವುಗಳು ಕಥಾ ಸಾಹಿತ್ಯದಲ್ಲಿ ವಿವಿಧ ರೂಪಗಳಲ್ಲಿ ವ್ಯಕ್ತವಾಗುತ್ತವೆ. ಇಂತಹ ನಿರೂಪಣೆಗಳು ಸಮಾಜದ ವಾಸ್ತವ ಚಿತ್ರಣವನ್ನು ಅನಾವರಣಗೊಳಿಸುವುದರ ಜೊತೆಗೆ, ಸಾಮಾಜಿಕ ಜಾಗೃತಿಯನ್ನು ಮೂಡಿಸುವ ಕಾರ್ಯವನ್ನೂ ನಿರ್ವಹಿಸುತ್ತವೆ.

ಕನ್ನಡ ಕಥಾ ಸಾಹಿತ್ಯದಲ್ಲಿ ಅನೇಕ ಲೇಖಕರು ಬಡತನವನ್ನು ತಮ್ಮ ಸೃಜನಶೀಲತೆಯ ಕೇಂದ್ರವಸ್ತುವಾಗಿಸಿಕೊಂಡು ಅದರ ಮಾನವೀಯ ಮತ್ತು ಸಾಮಾಜಿಕ ಆಯಾಮಗಳನ್ನು ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಗ್ರಾಮೀಣ ಮತ್ತು ನಗರ ಬದುಕಿನ ಹಿನ್ನೆಲೆಯಲ್ಲಿನ ಬಡವರ ದೈನಂದಿನ ಹೋರಾಟ, ಅಸಮಾನ ಸಾಮಾಜಿಕ ವ್ಯವಸ್ಥೆ, ವರ್ಗಸಂಘರ್ಷ ಹಾಗೂ ಬದುಕಿನ ಅನಿವಾರ್ಯತೆಗಳನ್ನು ಕಥೆಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಈ ನಿರೂಪಣೆಗಳು ಕೇವಲ ಸಾಹಿತ್ಯಿಕ ಸೌಂದರ್ಯಕ್ಕೆ ಸೀಮಿತವಾಗದೆ, ಸಮಾಜದಲ್ಲಿನ ಅಸಮಾನತೆ ಮತ್ತು ಶೋಷಣೆಯ ವಿರುದ್ಧ ಪ್ರಶ್ನಿಸುವ ಧ್ವನಿಯಾಗಿ ರೂಪುಗೊಂಡಿವೆ.

ಈ ಲೇಖನವು ಪ್ರಾತಿನಿಧಿಕ ಆಯ್ದ ಕಥಾ ಸಾಹಿತ್ಯದಲ್ಲಿ ಬಡತನದ ನಿರೂಪಣಾ ನೆಲೆಗಳನ್ನು ವಿಶ್ಲೇಷಿಸುವ ಉದ್ದೇಶವನ್ನು ಹೊಂದಿದೆ. ಕಥೆಗಳಲ್ಲಿ ಬಡತನವನ್ನು ಹೇಗೆ ಚಿತ್ರಿಸಲಾಗಿದೆ, ಅದರ ಕಾರಣಗಳು, ಪರಿಣಾಮಗಳು ಹಾಗೂ ಲೇಖಕರ ದೃಷ್ಟಿಕೋನವನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸುವ ಮೂಲಕ ಸಾಹಿತ್ಯ ಮತ್ತು ಸಮಾಜದ ನಡುವಿನ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಈ ಅಧ್ಯಯನ ಪ್ರಯತ್ನಿಸುತ್ತದೆ. ಬಡತನದ ನಿರೂಪಣೆಯ ಮೂಲಕ ಕಥಾ ಸಾಹಿತ್ಯವು ಸಾಮಾಜಿಕ ವಾಸ್ತವವನ್ನು ದಾಖಲಿಸುವುದರ ಜೊತೆಗೆ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸುವ ಪ್ರಮುಖ ಸಾಧನವಾಗಿದೆ ಎಂಬುದನ್ನು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ.

**ಸಾಮಾಜಿಕ ನೆಲೆ**

ಹಳ್ಳಿಗಳು ಪ್ರಧಾನವಾದ ಭಾರತೀಯ ಸಮಾಜದಲ್ಲಿ ಬಡವ, ಶ್ರೀಮಂತ, ಮೇಲ್ವರ್ಗ, ಕೆಳವರ್ಗ, ಮೇಲ್ಜಾತಿ–ಕೆಳಜಾತಿ ಎಂಬ ಏಣಿ ಶ್ರೇಣಿ ವ್ಯವಸ್ಥೆ ಪ್ರಾಚೀನ ಕಾಲದಿಂದಲೂ ಇರುವುದನ್ನು ಗಮನಿಸಬಹುದು. ಇಂತಹ ಸಾಮಾಜಿಕ ವ್ಯವಸ್ಥೆಯ ನಡುವಿನ ವ್ಯಂಗ್ಯ ವಿಪರ್ಯಾಸಗಳನ್ನು ಕಥೆಗಾರ್ತಿ ಬಿ.ಟಿ. ಲಲಿತಾನಾಯಕ್ ಅವರು ತಮ್ಮ ಕಥೆಗಳಲ್ಲಿ ಅನಾವರಣ ಮಾಡಿದ್ದಾರೆ. ಸಮಾಜದಲ್ಲಿ ಬಡವ ಶ್ರೀಮಂತರ ನಡುವಿನ ಅಂತರ ಮತ್ತು ಅವರ ಸ್ಥಾನಮಾನವನ್ನು ಹಸಿವಿನ ಭೀಕರತೆಯ ಹಿನ್ನೆಲೆಯಲ್ಲಿ **'ಕಳ್ರು'** ಕಥೆಯ ಮೂಲಕ ನಿರೂಪಿಸಿದ್ದಾರೆ. ಈ ಕಥೆಯಲ್ಲಿ ಬಾಡೂಟ ಉಣ್ಣುವ ಜಮಣಿಬಾಯಿ ಕುಟುಂಬ ಒಂದೆಡೆಯಾದರೆ, ಹಸಿವಿನಿಂದ ತಂಗಳು ಸಾರನ್ನು ಕದ್ದು ತಂದು ರೊಟ್ಟಿ ಉಣ್ಣುವ ಶಾಂತಿಯ ಕುಟುಂಬ ಮತ್ತೊಂದೆಡೆ. ಈ ಕಥೆಯಲ್ಲಿ ಬಡವರಾದ ಶಾಂತಿಯ ಕುಟುಂಬದವರು ತಂಗಳು ಸಾರನ್ನು ಕದ್ದು ತರುವುದು ಸಣ್ಣ ಪ್ರಮಾಣದ ಮತ್ತು ಹೊಟ್ಟೆಯ ಭೀಕರ ಹಸಿವಿಗೆ ಸಂಬಂಧಿಸಿದ್ದಾದರೆ, ಶ್ರೀಮಂತ ಜಮಣಿಬಾಯಿ ಮತ್ತು ಹನುಮಂತನ ಮನೆಯವರ ಕಳ್ಳತನ ಆಸ್ತಿ, ಅಂತಸ್ತುಗಳನ್ನು ಹೆಚ್ಚಿಸಿಕೊಳ್ಳುವುದಕ್ಕೆ

ದೊಡ್ಡ ಪ್ರಮಾಣದಲ್ಲಿ ನಡೆಯುವಂತಹದ್ದು. ಇಂತಹ ವೈರುಧ್ಯದ ಹಿನ್ನೆಲೆಯೊಳಗೆ "ಈ ನಾಡಿನಲ್ಲಿ ದೇಶವನ್ನೇ ಲೂಟಿ ಮಾಡಿ ರಾಜಾರೋಷದಿಂದ ಗೌರವದಿಂದ ಬದುಕುವ ಜನರು ಒಂದು ಕಡೆಗಿದ್ದರೆ, ಇನ್ನೊಂದು ಕಡೆ ಹಸಿವೆಯನ್ನು ತಾಳದೆ ತುತ್ತು ಕೂಳಿಗಾಗಿ ಒದ್ದಾಡಿ ತಮಗೆ ಸಲ್ಲಬೇಕಾದ ಪಾಲನ್ನು ಇನ್ನಾರೋ ಕಬಳಿಸುತ್ತಿರುವುದನ್ನು ನೋಡಿಯು ಅಸಹಾಯಕತೆಯಿಂದ ಒದ್ದಾಡುವ ಸ್ಥಿತಿಯಲ್ಲಿದ್ದಾರೆ. ಶ್ರೀಮಂತರು ಖದೀಮರು ತಿಂದು ಬಿಟ್ಟ ಎಂಜಲನ್ನು ಎತ್ತಿಕೊಂಡು ಹಸಿವನ್ನು ಹಿಂಗಿಸಿಕೊಳ್ಳುವವರು ಸಮಾಜದ ದೃಷ್ಟಿಯಲ್ಲಿ ಕಳ್ರು ಆಗುತ್ತಾರೆ. ಆದರೆ ಹಸಿದವರಿಗೆ ಹಂಚಿಕೊಡದೆ ಬಚ್ಚಿಟ್ಟುಕೊಂಡವರು ಸಾಚಾಗಳೆನಿಸುತ್ತಾರೆ ಎನ್ನುವುದನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ."[1] ಈ ಕಥೆಯಲ್ಲಿನ ವಿಪರ್ಯಾಸವೆಂದರೆ ಬಡವನಾದ ಗುಂಡನಾಯ್ಕ ಆತನು ಮಾಡಿದ ಸಾಲವನ್ನು ತೀರಿಸಲಾಗದೆ ಶಾಲೆಗೆ ಹೋಗುತ್ತಿದ್ದ ಮಗಳು ಪಾಪಿಯನ್ನು ಶಾಲೆ ಬಿಡಿಸಿ ಜಮಣಿಬಾಯಿಯ ಮನೆಯಲ್ಲಿ ಜೀತಕ್ಕಿಡುತ್ತಾನೆ. ಹೀಗೆ ಜಿಮಣಿಬಾಯಿಯ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಪಾಪಿ ಒಮ್ಮೆ ತಂಗಳು ಸಾರನ್ನು ಕದ್ದಳು ಎನ್ನುವ ಕಾರಣಕ್ಕಾಗಿ ಅಂದೇ ಅವಳನ್ನು ಕೆಲಸದಿಂದ ತೆಗೆದುಹಾಕುತ್ತಾರೆ. ಆಗ ಅಳುತ್ತ ಮನೆಗೆ ಬಂದ ಪಾಪಿಗೆ ತಾಯಿ ಶಾಂತಿ ಏನಾಯಿತು ಮಗ ಎಂದು ವಿಚಾರಿಸಿದಾಗ "ಮತ್ತೇ ಜಿಮಣತ್ತೇನೂ ಅವರ ಮನೆಯೋರೆಲ್ಲರೂ ನನಗ್ ಸಿಕ್ಕಸಿಕ್ಕಂಗ್ ಹೊಡ್ದು ಹೊರಗ್ ದಬ್ಬಿದ್ರು! ನಾವು ಕಳ್ರಂತೆ... ಈವತ್ತು ಗಡಿಗೆಯೊಳಗಿನ ಸಾರು ಕದ್ದೋಳು ನಾಳೆ ಇನ್ನೊಂದು ಕದಿಯಾಕೆ ತಾನೆ ಹೇಸ್ತಿಯೇನೆ ನೀನು? ಅಂತ ಬೈದು ಅಟ್ಟಿದ್ರು...! ನಾಳೆ ಊರ್ನೋರ್ನೆಲ್ಲಾ ಪಂಚಾಯ್ತಿಗ್ ಕೂರಸ್ತಾರಂತೆ. ನಮಿಗ್ ದಂಡ ಹಾಕಿಸ್ತಾರಂತೆ!..."[2] ಎಂದು ಬಿಕ್ಕುತ್ತಾ ಹೇಳುವಳು. ಇಲ್ಲಿ ಗಮನಿಸಬೇಕಾದ ಮುಖ್ಯ ಸಂಗತಿಯೆಂದರೆ, ಶ್ರೀಮಂತರು ಕಳ್ಳತನ ಹಾಗೂ ಏನೇ ತಪ್ಪು ಮಾಡಿದರೂ ಅದು ಲೆಕ್ಕಕ್ಕೆ ಬಾರದೆ ಹಾಗೇ ಮುಚ್ಚಿ ಹೋಗುತ್ತದೆ. ಆದರೆ ಬಡವರು ಹಸಿವಿನ ಭೀಕರತೆಯಿಂದ ತಂಗಳು ಸಾರನ್ನು ಕದ್ದು ತರುವಂತಹ ಚಿಕ್ಕ ತಪ್ಪನ್ನೇ ಮಾಡಿದರೂ ಈ ವ್ಯವಸ್ಥೆಯೊಳಗೆ ಅದು ದೊಡ್ಡ ಸುದ್ದಿಯಾಗಿ, ಅದಕ್ಕೆ ಪಂಚಾಯಿತಿ ಕರೆಯುವುದು, ದಂಡ ವಿಧಿಸುವುದು ಮುಂತಾಗಿ ಮಾಡುತ್ತಾರೆ. ಏಕೆಂದರೆ ಅವರು ಬಡವರು. ಕತೆಗಾರ್ತಿ ಈ ಅಂಶವನ್ನು ಅರ್ಥಗರ್ಭಿತವಾಗಿ ನಿರೂಪಿಸಿದ್ದಾರೆ.

ಶ್ರೀಮಂತನಾದ ಹನುಮಂತ ಗಂಧದ ಕೊರಡನ್ನು ಕದ್ದು ಕಾರಿನಲ್ಲಿ ತರುವಾಗ ಪೊಲೀಸರು ಅವನನ್ನು ಹಿಂಬಾಲಿಸುವರು. ಇಂತಹ ಸಂದರ್ಭದಲ್ಲಿ ಹನುಮಂತ ಕಳ್ಳತನದಿಂದ ತಂದ ಈ ಕೊರಡನ್ನು ಗುಂಡನ ಮನೆಯಲ್ಲಿಡಲು ಅವನಿಗೆ ಹೇಳುವನು. ಆಗ ಅವುಗಳನ್ನು ಅತ್ಯಂತ ಕಷ್ಟದಿಂದ ಮನೆಯೊಳಗೆ ಸಾಗಿಸುತ್ತಿದ್ದ ಗಂಡನನ್ನು ಸೋಜಿಗದಿಂದ ನೋಡಿದ ಹೆಂಡತಿ ಶಾಂತಿ ಇದನ್ನು ಎಲ್ಲಿಂದ ತಂದೆ ಎಂದು ಕೇಳಿದಾಗ, ಉತ್ತರಿಸುವ ಗೋಜಿಗೆ ಹೋಗದೆ ಕಳ್ರು ಕಳ್ರು ಎಲ್ಲಾ ಕಳ್ರು ಎಂದು ಗೊಣಗುವನು. ಹೀಗೆ ಶ್ರೀಮಂತರು ಮಾಡುವ ಕಳ್ಳತನ ಯಾರ ಕಣ್ಣಿಗೂ ಬೀಳುವುದಿಲ್ಲ. ಆದರೆ ಬಡವ ಗುಂಡನ ಮಗಳು ಬರೀ ತಂಗಳು ಸಾರು ಕದ್ದದ್ದಕ್ಕೆ ಪಂಚಾಯಿತಿ ಸೇರಿಸಿ, ದಂಡ ವಿಧಿಸಲು ಮುಂದಾಗುತ್ತಾರೆ. ಇಂತಹ ವೈರುಧ್ಯ ವಿಪರ್ಯಾಸಗಳಿಂದ ಶಾಂತಿ ಚಿಂತಾಕ್ರಾಂತಳಾಗಿ ತಲೆ ಮೇಲೆ ಕೈಹೊತ್ತು ಕುಳಿತುಕೊಂಡರೆ, ಗುಂಡನಾಯ್ಕ "ಥೂ! ಅವರ ದೊಡ್ಡ ಸ್ಥಾನಕ್ಕೆ ನನ್ನ ಎಕ್ಕಡ ಹೊಡೆಯಾ! ಕಳ್ರು ಯಾರಂತೆ? ನಾನಂತಾ? ದಂಡ ಯಾರು ಕೊಡಬೇಕಂತೆ? ನಾವಂತಾ!... ಥು ಥೂ" ಎಂದು ತೊದಲುತ್ತ ನಿದ್ದೆಯಲ್ಲಿ ಮುಳುಗುವನು. "ಬಡತನ ಮತ್ತು

ಹಸಿವು ಬದುಕನ್ನು ಕಿತ್ತು ತಿನ್ನುವ ರಾಕ್ಷಸನಿದ್ದಂತೆ ಎಂಬುದು ಕಳ್ರು ಕಥೆಯ ಆಶಯವಾಗಿದೆ. ಬಡತನ ವ್ಯಕ್ತಿತ್ವದ ಬವಣೆಯನ್ನು ಕುಂಟಿತಗೊಳಿಸುತ್ತದೆ. ಹಸಿವು ಎಂಥ ಹೇಯ ಕೆಲಸವನ್ನಾದರೂ ಮಾಡಿಸಬಹುದು. ಆದ್ದರಿಂದಲೇ **'ಕಳ್ರು'** ಕತೆಯ ಪಾಪಿ ಹಸಿವನ್ನು ತಾಳಲಾರದೆ ಪರಿತಪಿಸುವ ತನ್ನ ಕುಟುಂಬದ ಇಂಗಿತವನ್ನು ಕಡಿಮೆ ಮಾಡಲು ತಾನು ಕೆಲಸ ಮಾಡುವ ಯಜಮಾನನ ಮನೆಯಿಂದ ತಂಗಳು ಸಾರನ್ನು ಕದ್ದು ತರುತ್ತಾಳೆ. ಆದರೆ ತಾವು ಬಾಡೂಟವನ್ನುಂಡು ಕೆಲಸದಾಕೆಗೆ ತಂಗಳು ಸಾರನ್ನು ಕೊಡದೆ, ಅದನ್ನು ಆಕೆ ಕದ್ದಾಗ ಅವಳಿಗೆ ಚಿತ್ರಹಿಂಸೆ ಕೊಡುವುದು ಶ್ರೀಮಂತರ ಮನಸ್ಸನ್ನು ತೆರೆದು ತೋರಿಸುತ್ತದೆ. ಒಟ್ಟಾರೆ ಇಲ್ಲಿ ಉಳ್ಳವರು ಮತ್ತು ಬಡವರ ನಡುವಿನ ಅಂತರವನ್ನು ಶ್ರೀಮಂತರು ಕಳ್ಳರಾದರೂ ಅದು ಮುಚ್ಚಿಹೋಗಿ, ಬಡವರು ಸಣ್ಣದ್ದನ್ನು ಕದ್ದರೂ ಅದು ಬೆಳಕಿಗೆ ಬಂದು ದೊಡ್ಡದಾಗುವುದರ ಬಗ್ಗೆಯೂ ಇಲ್ಲಿ ಚಿತ್ರಣಗೊಂಡಿದೆ. ಆದರೆ ಬಡವರ ಸ್ವಾಭಿಮಾನವು ಉಳ್ಳವರಿಗಿಂತ ದೊಡ್ಡದು ಎಂಬ ಆಶಯ ಈ ಕತೆಯ ಕೊನೆಯಲ್ಲಿ ಚಿತ್ರಣಗೊಂಡಿದೆ."[3]

"ಶ್ರೀಮಂತರು ಕಳ್ಳರಾದರೂ ಅದಕ್ಕೊಂದು ಘನತೆ, ಬಡವರು ಕಳ್ಳರಲ್ಲದಿದ್ದರೂ ಆ ಹಣೆ ಪಟ್ಟಿ"[4] ಹಾಗಾಗಿಯೇ ಈ ಕಥೆಯಲ್ಲಿ ಬಡವರ ಕಳ್ಳತನವನ್ನು ಮನ್ನಿಸಿದರೆ, ದೊಡ್ಡವರ ಶ್ರೀಮಂತರ ಕಳ್ಳತನಕ್ಕೆ ಎಕ್ಕಡದಲ್ಲಿ ಹೊಡೆಯಲಾಗುತ್ತದೆ ಎಂಬುದನ್ನು ನಿರೂಪಿಸಲಾಗಿದೆ.

ಹಬ್ಬ ಮತ್ತು ಬಲಿ ಕಥೆಯಲ್ಲಿ ಬಡವನಾದ ಸಣ್ಣು ಹಬ್ಬದ ನೆಪದಲ್ಲಿ ಸಾಲ ಮಾಡಿ ನಿರ್ಗತಿಕನಾಗುವ ಅವನ ಅವಿವೇಕಿತನದ ಚಿತ್ರಣವನ್ನು ಈ ಕಥೆ ಒಳಗೊಂಡಿದೆ. ವರ್ಷಕ್ಕೊಮ್ಮೆ ಆಚರಿಸುವ ಮಾರಿ ಹಬ್ಬಕ್ಕಾಗಿ ತಮ್ಮ ಊರಿನ ಸಾಹುಕಾರ ಗೌಡನ ಬಳಿ ಸಾಲ ಮಾಡಿ ಅದಕ್ಕಾಗಿ ಇಡೀ ಜೀವನವೇ ಬಲಿಯಾಗಬೇಕಾದ ಸಂದರ್ಭ ಮತ್ತು ಅದರ ದುರಂತವನ್ನು ಲೇಖಕಿ ಇಲ್ಲಿ ಮನಮಿಡಿಯುವಂತೆ ಚಿತ್ರಿಸಿದ್ದಾರೆ. "ಮೌಢ್ಯತೆಯ ಬೆನ್ನು ಹತ್ತಿದ ಅಶಿಕ್ಷಿತ ಜನರ ಬಲಿ ಹೇಗೆ ಆಗುತ್ತದೆ ಎನ್ನುವುದನ್ನು ಈ ಕಥೆ ತಿಳಿಸುತ್ತದೆ. ಕೆಳಜಾತಿಯ ದುಡಿಯುವ ವರ್ಗದ ಸಮಸ್ಯೆಯನ್ನು ಎತ್ತಿಕೊಂಡು ವಾಸ್ತವತೆಗೆ ಹೆಚ್ಚು ಒತ್ತುಕೊಟ್ಟು ಯಥಾಸ್ಥಿತಿಯನ್ನು ಸರಳವಾದ, ನೇರವಾದ ಭಾಷೆಯಲ್ಲಿ ಹೇಳಿಕೊಂಡು ಹೋಗುತ್ತಲೇ"[5] ದಲಿತರ ಬದುಕಿನ ಯಥಾಸ್ಥಿತಿಯನ್ನು ವಾಸ್ತವದ ನೆಲೆಗಟ್ಟಿನಲ್ಲಿ ಚಿತ್ರಿಸಿದ್ದಾರೆ.

ಊರಮ್ಮನ ಜಾತ್ರೆಯಲ್ಲಿ ಸಣ್ಣು ಕಡಿಯುವುದು ಕುರಿಯನ್ನಲ್ಲ ತಾನೇ ಒಂದು ಪ್ರಾಣಿಯಂತೆ ಬಲಿಯಾಗುವ ಚಿತ್ರ ಕಂಡುಬರುತ್ತದೆ. ಮುನ್ನೂರು ರೂಪಾಯಿಗಳಿಗಾಗಿ ಒಂದು ವರ್ಷ ಜೀತಕ್ಕಿರುವ ಷರತ್ತಿಗೆ ಸಹಿ ಮಾಡಿ ಹಣ ತರುವ ಸಣ್ಣುವಿಗೆ ಹಬ್ಬ ಆಚರಿಸದೆ ಇರುವುದು ಸಾಧ್ಯವಿಲ್ಲದ ಮಾತು. ಅವನ ನಂಬಿಕೆಯ ಪ್ರಶ್ನೆ ಸರೀಕರೊಂದಿಗಿನ ಅವಮಾನದ ಸಂಗತಿ. ಅದಕ್ಕಾಗಿ ಏನಾದರೂ ಮಾಡಿ ತಾನೂ ಮರಿಯನ್ನೇ ಕಡಿದು ನೆಂಟರ ನಡುವೆ ಒಂದು ಕುಳ ಕುಟುಂಬವೆಂದು ತೋರಿಸಿಕೊಳ್ಳುವ ಅವನ ಸ್ವಾಭಿಮಾನ ಗೌಡನ ಮನೆಯ ಜೀತಕ್ಕೆ ಹಬ್ಬುತ್ತದೆ. ಇದು ನಮ್ಮ ಗ್ರಾಮೀಣ ಭಾರತದ ಸರ್ವೇ ಸಾಮಾನ್ಯವಾದ ಸಂಗತಿ. ಇಂತಹ ಪರಿಸ್ಥಿತಿಯ ಲಾಭ ಪಡೆದು ಶೋಷಣೆ ಮಾಡುವ ಕ್ರೌರ್ಯವನ್ನು ಕತೆ

ಹೇಳುತ್ತಲೇ ಭಾರತೀಯ ಗ್ರಾಮ ಸಮಾಜದ ಶೋಷಕ ಪದ್ಧತಿಯನ್ನು ಬಿಡಿಸಿಡುತ್ತದೆ. ಜೊತೆಗೆ ನಮ್ಮ ಸಂಪ್ರದಾಯಗಳು, ನಂಬಿಕೆಗಳು, ಬಡವರ ಪಾಲಿಗೆ ಉರುಳಾಗುವ ವೈರುಧ್ಯವನ್ನು ಕಥೆ ಹೇಳುತ್ತದೆ.”[6]

ದಾಳ ಕಥೆಯು ಚುನಾವಣೆಯಲ್ಲಿ ಸ್ಪರ್ಧಿಸಲು ಮುಂದಾಗುವ ಸನ್ನಿವೇಶದಿಂದ ಪ್ರಾರಂಭವಾದರೂ ಕೌಟುಂಬಿಕ, ಸಾಮಾಜಿಕ ಮತ್ತು ರಾಜಕೀಯ ವಿಷಯಗಳನ್ನು ತನ್ನೊಳಗಿಟ್ಟುಕೊಂಡು ಬೆಳೆಯುತ್ತಾ ಹೋಗುತ್ತದೆ. ಕೆಳವರ್ಗದ ಗೆಂಡೆಪ್ಪ ತನ್ನ ಹೆಂಡತಿ ಕಾಶಿಗೆ ಮಕ್ಕಳಾಗಲಿಲ್ಲವೆಂದು ಪಂಚಾಯಿತಿ ನಡೆಸಿ ನ್ಯಾಯ ಕೊಡಿಸಲಾಯಿತು. ಮುಂದೆ ಕೆಲವು ದಿನಗಳಲ್ಲಿ ಆ ಊರಿಗೆ ಚುನಾವಣೆ ಬಂದಾಗ ಗೆಂಡೆಪ್ಪ ಪೊಲೀಸಗೌಡರ ಪಾರ್ಟಿಯಿಂದ, ಕಾಶಿ ಮಾಲಿಗೌಡರ ಪಾರ್ಟಿಯಿಂದ ಪ್ರತಿಸ್ಪರ್ಧಿಗಳಾಗಿ ಚುನಾವಣೆಗೆ ನಿಂತರು. ಚುನಾವಣೆ ಹತ್ತಿರ ಬಂದಂತೆ ಕಾಶಿಯು ಗೆಲ್ಲುವ ಸೂಚನೆಗಳನ್ನು ಕಂಡುಕೊಂಡ ಜನ, ಗೆಂಡೆಪ್ಪನ ತಲೆ ಕೆಡಿಸಿದರು. ಕುಡಿಸಿದರು ತನ್ನ ಸರ್ವಸ್ವವನ್ನೇ ಗೌಡರ ಪಾದಕರ್ಪಿಸಿದಂತಿದ್ದ ಗೆಂಡೆಪ್ಪ ಕುಡಿದ ಮತ್ತಿನಲ್ಲಿ ಗೌಡರ ಹೇಳಿಕೆಯಂತೆ ಕಾಶಿಯನ್ನು ಚೂರಿಯಿಂದ ಇರಿದು ಕೊಲೆ ಮಾಡಿದನು. ಮೇಲುವರ್ಗದ ಜನರು ಕೆಳವರ್ಗದ ಜನರನ್ನು ಕದನಕ್ಕಿಳಿಸಿ ಅವರವರೇ ಕಚ್ಚಾಡಿ ಸಾಯುವುದನ್ನು ನೋಡಿ ಮೋಜು ಮಜಾ ಮಾಡುವ ಜನ ಎಂಬುದನ್ನು ಈ ಕಥೆ ತಿಳಿಸುತ್ತದೆ. ಈ ಕಥೆಯ ವಸ್ತು ಪ್ರಸ್ತುತ ಸಮಾಜದ್ದು. ಅಕ್ಕನ ಬಳಗದ ಗೆಳತಿಯರು, ಹಿರಿಯ ಹೆಂಗಸರುಗಳು, ಮಾಲಿಗೌಡರು, ಗೆಂಡೆಪ್ಪ ಆತನ ಗೆಳೆಯರು ಬದುಕುವ ರೀತಿಯನ್ನು ಕಥೆ ಸುಂದರವಾಗಿ ಕಟ್ಟಿಕೊಡುತ್ತದೆ. ಈ ಕಥೆಯು ಇಡೀ ಸಮಕಾಲೀನ ಸಮಾಜವನ್ನು ಓದುಗರ ಮುಂದೆ ಬಿಚ್ಚಿಡುತ್ತದೆ. ಕಾಶಿ ಗೆಂಡೆಪ್ಪರನ್ನು ಚುನಾವಣೆಗೆ ಗೌಡರು, ಮಾಲಿಪಾಟೀಲರು ದಾಳಗಳಾಗಿ ಬಳಸಿಕೊಂಡು ಅವರ ಬದುಕಿನ ಅಂತ್ಯ ಹಾಡಿರುವ ಈ ಕಥೆಯು ಸಾಮಾಜಿಕ ಸನ್ನಿವೇಶವನ್ನು ಪರಿಚಯಿಸುತ್ತಾ ವಿಚಾರಕ್ಕೆ ಹಚ್ಚುವ ಕೆಲಸವನ್ನು ಮಾಡುತ್ತದೆ.

‘ಪುಂಡಿ ಪೂಜಾರಿಯಾದಾಗ’ ಕಥೆಯಲ್ಲಿ ದಲಿತನೊಬ್ಬನಿಗೆ ಮೇಲ್ವರ್ಗದ ದೇವತೆಯಾದ ಮಹಾಲಕ್ಷ್ಮಿಯ ಪೂಜಾರಿತನ ದಕ್ಕಿದಾಗ ದಲಿತರ ಸಂಭ್ರಮ ಸಡಗರಗಳು ಒಂದೆಡೆಯಾದರೆ, ಮೇಲ್ವರ್ಗದವರ ಕೋಪ, ಆಕ್ರೋಶಗಳು, ಹೇಗೆ ವ್ಯಕ್ತವಾಗುತ್ತವೆ ಎಂಬುದನ್ನು ಕಥೆ ನಿರೂಪಿಸುತ್ತದೆ. ಪುಂಡಿ ಪೂಜಾರಿಯಾದಾಗ ಭಯ, ಭಕ್ತಿ, ಶ್ರದ್ಧೆ ಸೂಚನೆಗಳು ಅವನಲ್ಲಿ ಅನಾವರಣಗೊಂಡು ದಲಿತರಲ್ಲಿ ಶ್ರದ್ಧೆ ಪ್ರಾಮಾಣಿಕತೆಯೊಂದಿಗೆ ಆಚಾರಿಯಂಥ ಮೇಲ್ವರ್ಗದವರ ಸಿಟ್ಟು ಮೋಸಗಳು ವ್ಯಕ್ತವಾಗಿವೆ. ಒಬ್ಬ ದಲಿತನನ್ನು ಮಹಾಲಕ್ಷ್ಮಿ ದೇವಿಯ ಅರ್ಚಕನನ್ನಾಗಿ ಸ್ವೀಕರಿಸಲು ಒಪ್ಪದ ಮೇಲ್ವರ್ಗದ ಜನರ ಸಂಕುಚಿತ ಮನೋಭಾವ ಈ ಕಥೆಯ ಜೀವಾಳವಾಗಿದೆ. ಗೀತಾ ನಾಗಭೂಷಣರ ಒಟ್ಟು ಕಥೆಗಳು, ಕೆಳವರ್ಗದ ಮತ್ತು ದಲಿತರನ್ನೊಳಗೊಂಡ ಇಡೀ ಶೂದ್ರ ಸಮುದಾಯಗಳ ಬದುಕಿನ ಅಸಲಿ ತುಣುಕುಗಳ ಕತೆಯಾಗಿವೆ. ಇವುಗಳಲ್ಲಿ ನೋವಿದೆ, ಸಂಘರ್ಷವಿದೆ. ಕೆಲವೆಡೆ ರಾಜಿಯೂ ಇದೆ. ಅಂತೆಯೇ ಶೋಷಣೆಯ ಹಲವಾರು ಮಗ್ಗಲುಗಳ ಬೆತ್ತಲೆಯು ಇದೆ. ಉಳಿಯುವಿಕೆಗಾಗಿ ನಡೆಸುವ ಹೋರಾಟದ ವಿವಿಧ ಸ್ತರಗಳ ಪ್ರಾಮಾಣಿಕತೆ ಇಲ್ಲಿನ ಕಥೆಯಲ್ಲಿ ಕಾಣುತ್ತೇವೆ. ಅವರ ಎಲ್ಲ ಕಥೆಗಳ ಪ್ರಮುಖ ಆಶಯವೆಂದರೆ, ಶೋಷಣೆಗೆ ಒಳಗಾಗುವ ಜನರು ಜಾಗೃತರಾಗಿ, ಅಕ್ಷರವಂತರಾಗಿ, ಸುಂದರ ಬದುಕನ್ನು ಕಂಡುಕೊಳ್ಳಬೇಕೆನ್ನುವುದು.

ಬಿ.ಟಿ. ಜಾಹ್ನವಿಯವರ ಕಳ್ಳುಬಳ್ಳಿ ಕಥೆ ಎಷ್ಟೇ ಮನಕರಗಿಸುವಂತಿದ್ದರೂ ಜೀತ ಎಂಬುದು ದೈಹಿಕ ಮಟ್ಟದ್ದು ಎಂದು ಜಾಹ್ನವಿ ತಿಳಿದಿರುವಂತೆ ಆ ಕತೆ ಸೂಚಿಸುತ್ತದೆ. ತಿಪ್ಪನ ನೋವು ದೈಹಿಕ ಮಟ್ಟ ಮೀರಿದ್ದು, ಅವನ ಅವ್ವನ ಪರದಾಟ ತಾಯಿಯ ಪ್ರೀತಿಯನ್ನು ಮೀರಿದ್ದು, ಇದು ದಲಿತನಾದವನ ನೋವು ಮಾತ್ರವಲ್ಲ, ಮನುಷ್ಯ ಹಲವಾರು ಮಟ್ಟದಲ್ಲಿ ಅನುಭವಿಸುವ ಭಂಗ ಅಸ್ಪೃಶ್ಯತೆ ಮತ್ತು ಜೀತ ಎಂಬವುಗಳ ದುರಂತ ತಿಳಿದೊಡನೆ ಜಾಹ್ನವಿಗೆ ಅದು ಮನುಷ್ಯನ ದುರಂತ ಎಂಬುದು ಮನವರಿಕೆಯಾಗುತ್ತದೆ ಎಂದು ಲಂಕೇಶರು ಮುನ್ನುಡಿಯಲ್ಲಿ ಹೇಳಿದ್ದಾರೆ. ಮಹಿಳಾ ಸಮಸ್ಯೆಗಳ ಆಳಕ್ಕಿಳಿದು ವಿಶ್ಲೇಷಿಸುತ್ತಾ ಸಡನ್ ಆಗಿ ಕಥೆಗೆ ತಿರುವು ಕೊಡುತ್ತಾ ಹೊಸತನವೊಂದನ್ನು ಕಟ್ಟಿಕೊಡುವ ಜಾಹ್ನವಿಯವರು ದಲಿತರ ಅವಮಾನ ದಲಿತಾನುಭವದ ಮಾನಸಿಕ ಹಿಂಸೆಯ ತೀವ್ರಾನುಭವ ತಟ್ಟದೆ ಹೋಗುತ್ತದೆ.

ವೈದೇಹಿಯವರ ಒಂದು ಕಳ್ಳ ವೃತ್ತಾಂತ ಕಥೆಯಲ್ಲಿ ಮನುಷ್ಯ ಸಮಾಜ ಜೀವಿ ಸಮಾಜವಿಲ್ಲದೆ ಒಂಟಿಯಾಗಿ ಜೀವಿಸುವುದಿಲ್ಲ. ಮನುಷ್ಯ ಸಮಾಜದ ಭಾಗವಷ್ಟೇ ಅಲ್ಲ ಸಮಾಜವು ಕೂಡ ನಮ್ಮ ಜೀವಂತ ಒಂದು ಭಾಗ. ಸಮುದಾಯವು ಸಾಮಾಜಿಕ ಜೀವನವನ್ನು ಒಳಗೊಂಡಿರುವ ಒಂದು ವಿಶಾಲ ವ್ಯವಸ್ಥೆ, ಜನಾಂಗಿಯ ಸಮುದಾಯ, ಧಾರ್ಮಿಕ ಸಮುದಾಯ, ಸಮುದಾಯ, ಭಾಷಾ ಸಮುದಾಯದಂತಹ ಬಗೆ ಬಗೆಯ ಮಾನವ ಸಮೂಹಗಳು ಸಮಾಜದಲ್ಲಿ ಕಂಡುಬರುತ್ತವೆ.

ಒಂದು ಕಳ್ಳ ವೃತ್ತಾಂತ ಕಥೆಯಲ್ಲಿ ತಾಯಿ ಒಂದು ಸಂಸಾರಕ್ಕೆ ಆಧಾರ, ಗಂಡ, ಮನೆ, ಮಕ್ಕಳು ಎಲ್ಲವನ್ನು ಸರಿದೂಗಿಸಿಕೊಂಡು ಹೋಗಬೇಕು. ತಾಯಿಯಾಗಿ, ಆ ಸ್ಥಾನದ ಜವಾಬ್ದಾರಿ ಅರಿತುಕೊಂಡು ನಡೆಯುವುದು ಸುಲಭದ ಮಾತಲ್ಲ. ಅದರಲ್ಲೂ ಬಡತನದ ಸಂಸಾರವನ್ನು ತಾಯಿಯಾದವಳು ನಿಭಾಯಿಸಿಕೊಂಡು ಹೋಗುವುದು ಆಕೆಗೆ ಸವಾಲು ಇದ್ದಹಾಗೆ. ಬಡತನದ ಸಂಸಾರ, ಮಕ್ಕಳ ಆಸೆಗಳನ್ನು ಈಡೇರಿಸಲು ಬಚ್ಚಮ್ಮ ಮಾಡುತ್ತಿದ್ದ ಕಳ್ಳತನದ ವೃತ್ತಾಂತವೇ ಒಂದು ಕಳ್ಳ ವೃತ್ತಾಂತದ ಕಥೆ ಪತಿಯನ್ನು ಬಿಟ್ಟುಬಂದ ಕುಸುಮ, ಅಸಹಾಯಕತೆ, ಕಟ್ಟುಪಾಡುಗಳನ್ನು ಮೀರಿದ ಸಂಕೋಚ, ಅಪರಾಧಿ ಪ್ರಜ್ಞೆ ಅವಳಲ್ಲಿ ಕಾಡಿದ್ದುಂಟು. ಕಳ್ಳತನ ಮಾಡಿ ಸಂಸಾರದ ಹೊಟ್ಟೆ ತುಂಬಿಸುತ್ತಿದ್ದ ಬಚ್ಚಮ್ಮಳಲ್ಲಿ ಯಾವುದೇ ಪಾಪಪ್ರಜ್ಞೆ ಕಾಡುವುದಿಲ್ಲ, ಗಂಡನಾದವನು ತನ್ನ ಸಂಸಾರದ ಬಗ್ಗೆ ಕಾಳಜಿ ವಹಿಸದೆ ಇದ್ದಾಗ, ತಾಯಿಯಾಗಿ ಆಕೆಯೇ ಸಂಸಾರದ ಕಡೆ ಗಮನ ಕೊಡಬೇಕಾಗುತ್ತದೆ. ಮಕ್ಕಳ ಆಸೆಯನ್ನು ಈಡೇರಿಸಬೇಕಾಗುತ್ತದೆ.

**ಆರ್ಥಿಕ ನೆಲೆ**

ಸಮಕಾಲೀನ ಕನ್ನಡ ಕಥಾ ಸಾಹಿತ್ಯದಲ್ಲಿ ಆರ್ಥಿಕ ಬಡತನದ ವಸ್ತುವನ್ನಿಟ್ಟುಕೊಂಡು ಹಲವಾರು ಕಥೆಗಾರರು ಕತೆ ರಚಿಸಿದ್ದಾರೆ. ಆರ್ಥಿಕವಾಗಿ ಹಿಂದುಳಿದಿರುವ ತಳಸಮುದಾಯದ ಬಗ್ಗೆ ಆರ್ಥಿಕವಾಗಿ ಹೇಗೆ ಬಡತನವನ್ನು ಅನುಭವಿಸುತ್ತಿದ್ದಾರೆ ಎಂಬುದನ್ನು ಬಡತನದ ನಿರೂಪಣೆಯಲ್ಲಿ ಒಂದು ಪ್ರಮುಖ ಅಂಶವಾಗಿ ನಿರೂಪಿಸಲಾಗಿದೆ. ಆರ್ಥಿಕ ಬಡತನದ ಬಗ್ಗೆ ಬಸವರಾಜ ಕಟ್ಟಿಮನಿಯವರ ಹೊಸ ವರ್ಷದ ಹಳೆಯ ರಾತ್ರಿ, ನಿರಂಜನರ ಕೊನೆಯ ಗಿರಾಕಿ, ಚದುರಂಗರ ಬಣ್ಣದ ಬೊಂಬೆ, ಕೊರಡ್ಕಲ್ ಶ್ರೀನಿವಾಸರಾವ್ ಅವರ ದನಿಯರ ಸತ್ಯನಾರಾಯಣ, ಕುಂವೀ ಅವರ ದೇವರ ಹೆಣ ಕತೆಗಳಲ್ಲಿ ಆರ್ಥಿಕ ಬಡತನದ ಬಗ್ಗೆ ನಿರೂಪಣೆಯಾಗಿದೆ.

ಹೊಸ ವರ್ಷದ ಹಳೆಯ ರಾತ್ರಿ ಕತೆಯಲ್ಲಿ ಆರ್ಥಿಕ ಬಡತನದ ಬಗ್ಗೆ ತಿಳಿಸುವ ಕಥೆಗಳಲ್ಲಿ ಇದು ಪ್ರಮುಖವಾದದ್ದಾಗಿದೆ. ಆರ್ಥಿಕ ಬಡತನದಿಂದ ನರಳುತ್ತಿರುವ ಬಡಜನರ ದಿನನಿತ್ಯದ ಜೀವನದ ಗತಿ ಈ ಕತೆಯಲ್ಲಿ ನಿರೂಪಿತವಾಗಿದೆ. ಅದಕ್ಕೆ ಅವರಲ್ಲಿ ಕಂಡುಬರುವ ಆರ್ಥಿಕ ಸಮಸ್ಯೆ, ಕರಿಯ ಒಬ್ಬ ಸಾಮಾನ್ಯ ಕೂಲಿಕಾರ. ಗುಡಿಸಲಿನಲ್ಲಿ ವಾಸವಾಗಿರುತ್ತಾನೆ. ಹೊಸ ವರುಷದ ಆ ದಿನದಂದು ಅವರ ಪಕ್ಕದಲ್ಲೆ ಇದ್ದ ಶ್ರೀಮಂತರ ಸೌಧದಲ್ಲಿ ಹಬ್ಬದ ಸಂಭ್ರಮ ಎಲ್ಲೆಲ್ಲೂಸಂತಸದ ವಾತಾವರಣ. ಹಬ್ಬದ ಖುಷಿಯಲ್ಲಿ ಎಲ್ಲಾ ಮೈಮರೆಯುತ್ತಾರೆ. ಎಲ್ಲೆಡೆಯು ರಜಾ. ಅವರವರ ಇಚ್ಛೆಯಂತೆ ವರ್ತಿಸುವ ಈ ಜನಗಳ ಮಧ್ಯೆ ಬಡವರ ಕೂಗು ಕೇಳಿಸುವುದಿಲ್ಲ. ಇಂತಹದೇ ಸ್ಥಿತಿಯಲ್ಲಿ ಕರಿಯ ಕೂಲಿಕಾರ ತನ್ನ ಮಗುವಿಗೆ ಹಸಿವನ್ನು ತೀರಿಸಲು ಆಗದಂತಹ ಸ್ಥಿತಿಯಲ್ಲಿ ಇರುತ್ತಾನೆ. ಒಂದು ಹೊತ್ತಿನ ಊಟಕ್ಕೂ ಪರಿತಪಿಸುವ ಈ ಜನಗಳ ಮಧ್ಯೆ ಹಣವನ್ನು ವ್ಯರ್ಥವಾಗಿ ಖರ್ಚುಮಾಡಿ ಆಡಂಬರ ಜೀವನ ನಡೆಸುತ್ತಿರುವ ವರ್ಗವಾಗಿ ಶ್ರೀಮಂತ ವರ್ಗವನ್ನು ಇಲ್ಲಿ ಕಾಣುತ್ತೇವೆ.

ಹೊಸ ವರ್ಷದ ಮುನ್ನಾ ದಿನ ಅಂದು ಎಲ್ಲೆಡೆಯು ಸಂಭ್ರಮದ ವಾತಾವರಣ, ದಿನಗೂಲಿ ಮಾಡುವಂತಹ ಕರಿಯನ ಗುಡಿಸಲಿನಲ್ಲಿ ಎಲ್ಲಾ ದಿನಗಳು ಒಂದೇ ಆಗಿರುತ್ತದೆ. ಯಾವುದೇ ಹಬ್ಬ ಹರಿದಿನಗಳ ಬಗ್ಗೆ ಅವರಿಗೆ ಅರಿವೇ ಇರುವುದಿಲ್ಲ. ಏಕೆಂದರೆ ಅವರಲ್ಲಿ ಹಣದ ಕೊರತೆ, ದಿನಗೂಲಿಯಿಂದಲೂ ಅವರು ಒಂದು ಹೊತ್ತಿನ ಕೂಳನ್ನು ಹೊಂದುವುದು ಕಷ್ಟವಾಗಿರುತ್ತದೆ. ಇಂತಹ ಸ್ಥಿತಿ ಇರುವಾಗ ಅವರಿಗೆ ಹೊಸ ವರ್ಷದ ಸಂಭ್ರಮ ಕೇವಲ ಕಲ್ಪನೆ. ಅವರು ಹಸಿವು ತೀರಿದ ದಿನವೇ ಅವರಿಗೆ ಹೊಸ ವರುಷದ ಹಬ್ಬದ ದಿನವಾಗಿರುತ್ತದೆ. ಎಲ್ಲಾ ದಿನವೂ ಅವರಿಗೆ ಒಂದೇ ದಿನ. ಪ್ರತಿನಿತ್ಯ ಹೊಸ ಹೊಸ ದುಃಖಗಳನ್ನು ಅನುಭವಿಸುತ್ತಿರುತ್ತಾರೆ.

ಕಥೆಯಲ್ಲಿ ಬಡಕುಟುಂಬದ ಜೀವನದ ಬಗ್ಗೆ ಚಿತ್ರಿಸುವಾಗ ಶ್ರೀಮಂತರ ಹೋಲಿಕೆಯನ್ನು ತಂದುಕೊಂಡಿದ್ದಾರೆ. ಆರ್ಥಿಕವಾಗಿ ಇವರ ಸ್ಥಿತಿ ತುಂಬಾ ಶೋಚನೀಯವಾಗಿದೆ. ಹೊಸ ವರುಷವನ್ನು ಆಚರಿಸುವಾಗ ಹೊಸ ಬದುಕನ್ನು ಬದುಕುವುದಾಗಲೀ ಬಡಜನರಿಗೆ ಸಾಧ್ಯವಿಲ್ಲ ಎಂಬುದು ಈ ಕಥೆಯ ಪ್ರಮುಖ ಅಂಶವಾಗಿದೆ. ಈ ಕಥೆಯು ಬಸವರಾಜ ಕಟ್ಟಿಮನಿಯವರ ಬದುಕಿನ ಪ್ರತಿಬಿಂಬದ ಕಥೆಯಾಗಿದೆ ಎಂದು ಶೇಷಗಿರಿರಾವ್ ಹೇಳುತ್ತಾರೆ. ಈ ಕಥೆಯಲ್ಲಿ ಪ್ರಮುಖವಾಗಿ ಕಾಣುವ ಅಂಶ ಆರ್ಥಿಕ ಸಮಸ್ಯೆಯಾಗಿದೆ. ಆರ್ಥಿಕವಾಗಿ ಬಡವಾದ ಕುಟುಂಬದ ಚಿತ್ರಣ ಈ ಕಥೆಯಲ್ಲಿ ನಿರೂಪಿತವಾಗಿದೆ.

ನಿರಂಜನರವರು ಹಲವಾರು ಕಥೆಗಳಲ್ಲಿ ಆರ್ಥಿಕ, ಬಡತನ ಅದನ್ನು ಹಿಂಬಾಲಿಸಿ ಬರುವ ಸಮಸ್ಯೆಗಳನ್ನು ತಮ್ಮ ಕಥೆಗಳಲ್ಲಿ ವಸ್ತುವಾಗಿರಿಸಿಕೊಂಡಿದ್ದಾರೆ. ನಿರಂಜನರು ಕಟ್ಟಿಮನಿಯವರಂತೆ ಆರ್ಥಿಕವಾಗಿ ಬಡತನವನ್ನು ಒಳಗೊಂಡಿರುವ ಕಥೆಗಳನ್ನು ರಚಿಸಿದ್ದಾರೆ. ಹಸಿವು, ಬಡತನ ಇವರ ಕಥೆಗಳ ವಾಸ್ತುವಾಗಿಸಿದ್ದಾರೆ. 'ಕಾಯಶ್ರೀ ಗೌರಿ' ಬರಗಾಲದ ಸಮಾಜದಲ್ಲಿ ಉಂಟಾಗುವಂತಹ ಅನಾಹುತಗಳ ಬಗ್ಗೆ ಈ ಕಥೆ ತಿಳಿಸಿಕೊಡುತ್ತದೆ. ಇದರಿಂದಾಗಿ ಎಷ್ಟೋ ಸಂಸಾರಗಳು ಹಾಳಾಗುವ ಸ್ಥಿತಿಯನ್ನು ಕಾಣುತ್ತೇವೆ. ಇದೇ ವಸ್ತುವನ್ನಾಗಿ ಇಟ್ಟುಕೊಂಡು ನಿರಂಜನರು ಈ ಕಥೆಯಲ್ಲಿ ವಿವರಿಸುತ್ತಾರೆ.

ಚೆನ್ನಿ ಮತ್ತು ಅವಳ ಗಂಡ ಮಕ್ಕಳು ಇಲ್ಲಿ ಕಥೆಯ ಕೇಂದ್ರವ್ಯಕ್ತಿಗಳಾಗಿದ್ದಾರೆ. ಬರಗಾಲದ ಪರಿಣಾಮವಾಗಿ ಇವರು ಮೈಸೂರಿಗೆ ವಲಸೆ ಬರುತ್ತಾರೆ. ಹೀಗೆ ವಲಸೆ ಬಂದ ಇವರು ಕೆಲಸಕ್ಕಾಗಿ ಅಲೆಯುತ್ತಾರೆ. ಆದರೆ ಯಾವುದೇ ಕೆಲಸ ಇವರಿಗೆ ದೊರೆಯುವುದಿಲ್ಲ. ದುಡಿದರೆ ಕೂಲಿಯ ಹಣದಿಂದ ಲಾಭ, ಇಲ್ಲದಿದ್ದರೆ ಉಪವಾಸ. ಆದರೆ ಇಲ್ಲಿ ಕೂಲಿ ಕೆಲಸವು ಇವರಿಗೆ ದೊರೆಯದ ಕಾರಣದಿಂದಾಗಿ ಹಸಿವಿನ ಬೇಗೆಯನ್ನು ತಾಳಲಾರದೆ ತನ್ನ ಮಕ್ಕಳನ್ನು ಮಾರುತ್ತಾರೆ. ಇಲ್ಲಿ ಇವರ ಬಡತನವನ್ನು ಕಥೆಗಾರರು ನಿರೂಪಿಸಿದ್ದಾರೆ. ಮಕ್ಕಳನ್ನು ಮಾರುವುದು ಅವರ ಹಸಿವನ್ನು ತೀರಿಸಿಕೊಳ್ಳಲು ಅಲ್ಲ. ಮಕ್ಕಳು ಹಸಿವಿನಿಂದ ನರಳುತ್ತಿರುವುದನ್ನು ನೋಡಲಾಗದೇ ಅವುಗಳು ಬೇರೆ ಎಲ್ಲಾದರೂ ಅನ್ನ ಸಿಕ್ಕಿ ಅವು ಬದುಕಲಿ ಎಂಬುದು ಇದರ ಹಿಂದಿನ ಉದ್ದೇಶವಾಗಿರುತ್ತದೆ. ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇದ್ದರೆ ಅವರು ಮಕ್ಕಳನ್ನು ಮಾರುತ್ತಿರಲಿಲ್ಲ. ಯಾವುದೇ ರೀತಿಯಾದ ಆದಾಯವಿಲ್ಲದ ಅವರು ಮಕ್ಕಳನ್ನು ಮಾರುತ್ತಾರೆ. ಆರ್ಥಿಕವಾಗಿ ಇಲ್ಲಿ ಬಡತನದ ನಿರೂಪಣೆ, ಹಸಿವಿನ ಮುಖಾಂತರ ಹೇಳಲು ಹೊರಟಿದ್ದಾರೆ. ಬರಗಾಲದ ಸ್ಥಿತಿಯಲ್ಲಿನ ಜನರ ಜೀವನವನ್ನು ಕಾಣುತ್ತೇವೆ. ಇಂತಹ ಪರಿಸ್ಥಿತಿಯಲ್ಲಿ ಅವರು ಜೀವನ ಮಾಡಲು ಹೇಗೆ ಸಾಧ್ಯವಾಗುತ್ತದೆ. ಯಾವುದೇ ಜನರ ಆರ್ಥಿಕ ಸಹಾಯವಿಲ್ಲದೆ ಚೇತರಿಸಿಕೊಳ್ಳಲು ಅಸಾಧ್ಯ. ತಂದೆ ತಾಯಿಗಳು ಮಕ್ಕಳನ್ನು ಮಾರಿ ತಾವು ತಮ್ಮ ಜೀವನವನ್ನು ಬಲಿಕೊಡುವ ಸ್ಥಿತಿಯನ್ನು ಈ ಕಥೆಯಲ್ಲಿ ನಿರೂಪಿಸಲಾಗಿದೆ.

ಕೊನೆಯ ಗಿರಾಕಿ ಎಂಬ ಕಥೆಯಲ್ಲಿ ಆರ್ಥಿಕ ಬಡತನದಿಂದಾಗಿ ಒಂದು ಹೆಣ್ಣಿನ ಜೀವನ ಯಾವ ರೀತಿ ಅಂತ್ಯವಾಗುತ್ತದೆ ಎಂಬುದನ್ನು ಈ ಕಥೆಯು ಹೇಳುತ್ತದೆ. ಆರ್ಥಿಕವಾಗಿ ಬಡವರಾದ್ದರಿಂದ ಅವರ ಕುಟುಂಬವೇ ಛಿದ್ರವಾಗಿ ಆ ಹೆಣ್ಣುಮಗುವು ಬೀದಿ ಪಾಲಾಗುತ್ತಾಳೆ. ಸಹೃದಯರಿಂದ ವಿಮರ್ಶಕರಿಂದ ಹಲವು ರೀತಿಯಲ್ಲಿ ಪ್ರಶಂಸೆಗೆ ಒಳಗಾದ ಕಥೆಯಿದು. ಕಾಣಿ ಇಲ್ಲಿ ಕಥೆಯ ಕೇಂದ್ರಬಿಂದು. ಮೂಕಿಯಾದ ಹೆಣ್ಣು ಎಲ್ಲರಂತೆ ತಂದೆ, ತಾಯಿ ಅಣ್ಣಂದಿರಿಂದ ಬೆಳೆದವಳು. ತೀವ್ರವಾದ ಬಡತನದ ಕಾರಣವಾಗಿ ಪಟ್ಟಣಕ್ಕೆ ವಲಸೆ ಬರುತ್ತಾರೆ. ಆರ್ಥಿಕ ಬಡತನದ ಕಾರಣದಿಂದಾಗಿ ಒಬ್ಬೊಬ್ಬರು ಒಂದೊಂದು ದಿಕ್ಕಾಗುತ್ತಾರೆ. ಆನಂತರ ಕಾಣಿಯು ಒಂದು ದಿಕ್ಕಾಗುತ್ತಾಳೆ. ಹಸಿವನ್ನು ತಾಳಲಾರದೆ ಯಾರು ಕರೆಯುತ್ತಾರೋ ಅವರ ಹಿಂದೆ ಹೋಗಲು ಶುರು ಮಾಡಿದಳು. ಆದರೆ ಅಂದಿನ ಸಮಾಜದಲ್ಲಿನ ಕೆಲವರು ದುಷ್ಟ ಶಕ್ತಿಗಳ ಪಾಲಿಗೆ ಬಲಿಯಾಗುತ್ತಾಳೆ. ಇದು ಬಡ ಹೆಣ್ಣುಮಗಳನ್ನು ಸ್ವಾರ್ಥ ಪುರುಷ ಜನಾಂಗವು ಬಳಸಿಕೊಳ್ಳುವ ಕ್ರೂರ ವ್ಯವಸ್ಥೆಯನ್ನು ಇಲ್ಲಿ ಕಾಣುತ್ತೇವೆ. ಅವರ ಕುಟುಂಬ ಆರ್ಥಿಕವಾಗಿ ಸುಸ್ಥಿತಿಯಲ್ಲಿದ್ದರೆ ಬಹುಶಃ ಇಂತಹ ಘಟನೆ ನಡೆಯುತ್ತಿರಲಿಲ್ಲ. ಕಾಣಿಯು ಸ್ವಾರ್ಥ ಪುರುಷ ಸಮಾಜದ ಕಾಮತೃಷೆಗೆ ಬಲಿಯಾಗುತ್ತಿರಲಿಲ್ಲ ಎನಿಸುತ್ತದೆ. ಜೀವನದಲ್ಲಿ ಪ್ರೀತಿಯಿಂದ ನೋಡಿಕೊಂಡವನು ಎಂದರೆ ಮೊಂಡುಕೈ ಭಿಕ್ಷುಕ. ಅವನು ಇವಳನ್ನು ಬಿಟ್ಟುಹೋದ ನಂತರ ಅವಳ ಪರಿಸ್ಥಿತಿ ಬರ್ಬರವಾಗಿದೆ. ಒಂದು ತುತ್ತಿನ ಅನ್ನಕ್ಕಾಗಿ ಅವಳ ಮೈಮಾರಿ ಬದುಕುವ ದರಿದ್ರ ಬದುಕನ್ನು ಅವಳು ಅನುಭವಿಸುವ ಚಿತ್ರಣ ಮನಕರಗುವಂತೆ ಇದೆ. ಅವಳ ಸ್ಥಿತಿಯ ಕಠೋರವಾದ ಚಿತ್ರಣ ಇಲ್ಲಿ ಕಂಡುಬರುತ್ತದೆ. ಕಥೆಗಾರನ ಯಶಸ್ಸಿರುವುದೇ ಇಲ್ಲಿ. ಯಾವ ಕಡೆಗೂ

ಪಾಲುದಾರಿಕೆ ವಹಿಸದೇ ನಿರ್ಲಿಪ್ತತೆಯಿಂದ ವಿವರಿಸುವ ಕತೆಗಾರನ ಮನಸ್ಸಿನ ರೋಷ, ಅನುಕಂಪ, ಹತಾಶೆಗಳನ್ನು ಸಮ್ಮಿಳಿತಗೊಳಿಸಿಕೊಂಡು ಭಾಷೆಯಲ್ಲಿ ಕಂಡುಬಂದಿದೆ.

ಸರ್ಕಲಿನಲ್ಲಿ ಅವಳ ದೇಹ ಒಬ್ಬ ದಡಿಯನ ದುಶ್ಚಟಕ್ಕೆ ಕೊನೆಯದಾಗಿ ಬಲಿಯಾಗುತ್ತದೆ. ಅವಳ ಹಣೆಬರಹವನ್ನು ಕೂಡ ಆಹಾರಕ್ಕಾಗಿ ಹವಣಿಸುವ ಗಿಡುಗನ ಪ್ರಸ್ತಾಪ ಕಥೆಗೆ ಒಂದು ರೀತಿಯಾದ ಸ್ಪಷ್ಟ ಕಾಣಿಯನ್ನು ತಂದುಕೊಡುತ್ತದೆ. ಮುಗ್ಧ ಕಣ್ಣಿಗೆ ಪ್ರತಿಭಟಿಸುವ ಸ್ವರವೇ ಇಲ್ಲ. ಬಡ ಜೀವದ ರಕ್ಷಣೆಯ ಜವಾಬ್ದಾರಿಯನ್ನು ಹೊರಬೇಕಾಗಿದ್ದ ಸಮಾಜವು ಮೂಕ, ಕುರುಡ, ಹೃದಯಹೀನ, ಇಂಥವಳನ್ನು ಕೊನೆಗೆ ಗಿಡುಗವು ಸಮೀಪಿಸುವದರಲ್ಲಿ ವ್ಯಕ್ತವಾಗುವ ಕಟುವ್ಯಂಗ್ಯವು ನಮ್ಮ ಕ್ರೂರ ವ್ಯವಸ್ಥೆಯನ್ನು ಕಟುವಾಗಿ ಚಿತ್ರಿಸುವಂತೆ ಮಾಡಿದೆ. ಶೋಷಿತರ ಪರ ಲೇಖಕನ ಹೆಚ್ಚು ನಿರ್ದಿಷ್ಟತೆಯಿಂದ ಕೇಳುವಂತಾಗುತ್ತದೆ. ಕಾಣಿಯನ್ನು ಬಹಳಷ್ಟು ಜನರು ಅನುಬೋಗಿಸುತ್ತಾರೆ. ಕತೆ ಅವಳ ದುರಂತವನ್ನು ಹಂತ ಹಂತವಾಗಿ ನಿರೂಪಿಸುತ್ತದೆ. ಅವಳಿಗೇ ಗೊತ್ತಿಲ್ಲದ ಸತ್ಯಗಳು ಕಥೆಗಾರನಿಂದ ವ್ಯಕ್ತವಾಗುತ್ತಾ ಹೋಗುತ್ತದೆ. ಅವಳ ಹಸಿವು, ಆರ್ಥಿಕ ಬಡತನ, ಪ್ರಕೃತಿ ಮಾಡಿದ ಮೋಸ ಹಾಗೂ ಸಮಾಜ ಮಾಡುವ ಮೋಸ ಇವೆರಡು ಅವಳನ್ನು ಒಂದೇ ಸಂದರ್ಭದಲ್ಲಿ ಹಿಂಸಿಸುವುದನ್ನು ಕಥೆಯಲ್ಲಿ ನಿರೂಪಿತವಾಗಿದೆ.

ಕುಂ. ವೀರಭದ್ರಪ್ಪನವರ ಕಥೆಗಳಲ್ಲಿ ಆರ್ಥಿಕ ಬಡತನದ ಪರಿಕಲ್ಪನೆಯನ್ನು ಅವರ ಪ್ರಮುಖ ಕಥೆಗಳಲ್ಲಿ ಒಂದಾದ ರತ್ನ ಎಂಬ ಹುಡುಗಿಯು ಉಗಾದಿ ಎಂಬ ಆಟವೂ ಎಂಬ ಕತೆಗಳಲ್ಲಿ ಸಮಕಾಲೀನ ಸಂಘರ್ಷ ರೂಢಿ, ಸಂಪ್ರದಾಯ, ಧಾರ್ಮಿಕ ಚಟುವಟಿಕೆಗಳ ಹೆಸರಿನಲ್ಲಿ ಆರ್ಥಿಕವಾಗಿ ಹೀನ ಸ್ಥಿತಿಯಲ್ಲಿರುವ ಅಸಹಾಯಕರಾದ ಕೆಳವರ್ಗದವರು ಶೋಷಿತರ ದಬ್ಬಾಳಿಕೆಗೆ ಗುರಿಯಾಗುತ್ತಿರುವುದು ಈ ಕತೆಯ ವಸ್ತುವಾಗಿದೆ.

ಬದುಕು ಸಾಗಿಸುವುದು ಕಷ್ಟವಾಗಿರುವಂತಹ ಸಂದಭದಲ್ಲಿ ಹಬ್ಬವನ್ನು ಸಾಲ ಮಾಡಿಯೂ ಸಹ ಮಾಡಬೇಕು. ಹಣ ಇರಲಿ ಇಲ್ಲದಿರಲಿ ಹಬ್ಬ ಸಾಂಪ್ರದಾಯಿಕವಾದ ಕಾರ್ಯಗಳನ್ನು ಮಾಡಲೇಬೇಕು. ತಿಪ್ಪವ್ವ ಇಲ್ಲಿ ಆರ್ಥಿಕ ಬಡತನವಿದ್ದರೂ ಸಾಂಪ್ರದಾಯಿಕವಾಗಿ ಮಾಡಬೇಕಾದ ಕಾರ್ಯಗಳನ್ನು ಮಾಡಲೇ ಬೇಕಾಗುತ್ತದೆ. ಅದು ಅಂದಿನ ಸಮಾಜದಲ್ಲಿ ಸಾಂಪ್ರದಾಯಿಕವಾಗಿ ಶೋಷಿಸುವ ಪುರೋಹಿತ ಸಮಾಜವನ್ನು ಈ ಕಥೆಯಲ್ಲಿ ನಿರೂಪಣೆಯಾಗಿದೆ. ಪುರೋಹಿತಶಾಹಿ ಪ್ರತಿನಿಧಿಯಾಗಿ ಶುಕ್ರಯ್ಯ ‘ಚುಟ್ಟದ ಖರ್ಚಿಗೆ ಮೂರು ಪಾವಲಿ ಕೊಡಬೇಕವ್ವ ಇಲ್ಲಾಂದ್ರ ಭಿನ್ನ ತೀರ್‍ಸಿ ಏನ್ ಫಲ’ ಎಂದು ಹೇಳುವ ಮಾತಿನಲ್ಲಿ ಬಿಟ್ಟಿಕೂಳು ತಿಂದಿದ್ದಲ್ಲದೆ ದಕ್ಷಿಣೆ ಹೆಸರಿನಲ್ಲಿ ಹಣ ವಸೂಲಿ ಮಾಡುವ ವ್ಯವಸ್ಥೆಯ ಹೀನ ಸಂಸ್ಕೃತಿಯ ಒಳಗಿನ ಮನೋಧರ್ಮವನ್ನು ಪ್ರತಿನಿಧಿಸುತ್ತದೆ. ಸಾಂಪ್ರದಾಯಿಕವಾಗಿ ನಡೆದು ಬಂದಿರುವ ತ್ರಿವಿಧಿ ದಾಸೋಹ ಕಲ್ಪನೆ ಸಮಕಾಲೀನ ಸಂದರ್ಭದಲ್ಲಿ ಕೆಳವರ್ಗಗಳ ಜಾಗೃತಿಯಿಂದ ಹೇಗೆ ಮಹತ್ವ ಕಳೆದುಕೊಳ್ಳುತ್ತಿದೆ ಎಂಬುದನ್ನು ರತ್ನಾಳ ಮಾತುಗಳ ಮೂಲಕ ಕಾಣುತ್ತೇವೆ.

ಪ್ರತಿಭಟನೆಯ ಪ್ರತೀಕವಾದ ರತ್ನ ಲೋ ಮಕ್ಕಾ ಮುತ್ತಾಳ ಐನೋರ್‍ನ ಹಿಡುಕೊಳ್ಳಿ ಪುಗಸಟ್ಟೆ ತಿನ್ನೆ ನಾಚಿಕೆ ಆಗಲಿಲ್ಲೇನೋ ಎಂದು ಪೊರಕೆಯಿಂದ ಹೊಡೆದು ವಿರೋಧಿಸುವುದು ಹಾಗೂ ಮಾಡಿದ ಹೋಳ್ಗೆನೆಲ್ಲಾ ತಿಂತಿಯೇನೋ ಬಾಡ್ಯಾವ್ ಎನ್ನುವುದು ಅವಳ ಹಸಿವಿನ ಹಾಗೂ ಆರ್ಥಿಕ ಬಡತನದ

ತೀವ್ರತೆಯನ್ನು ಅಭಿವ್ಯಕ್ತಿಸುತ್ತದೆ. ಪುರೋಹಿತ ವರ್ಗ ತಮ್ಮನ್ನು ಆರ್ಥಿಕವಾಗಿ ಇನ್ನಷ್ಟು ಬಡವರನ್ನಾಗಿಸುವುದು ಕಥೆಯ ನಿರೂಪಣೆಯಾಗಿದೆ. ಯಾವುದೇ ಶ್ರಮವಿಲ್ಲದೆ ಪುರೋಹಿತ ವರ್ಗ ಪಡೆಯುವ ಹಣವನ್ನು ರತ್ನಳ ಮಾತುಗಳಲ್ಲಿ ಕಾಣುತ್ತೇವೆ. ಆರ್ಥಿಕವಾಗಿ ಶೋಷಿಸುವ ಈ ಜನರ ವಿರುದ್ಧ ಇವಳ ಪ್ರತಿಭಟನೆಯನ್ನು ಕಾಣುತ್ತೇವೆ. ಆರ್ಥಿಕವಾಗಿ ಬಡವರನ್ನಾಗಿಸುವಂತಹ ಜನರನ್ನು ಸಹ ಈ ಕಥೆ ನಿರೂಪಿಸುತ್ತದೆ. ತಿಪ್ಪವ್ವ ಆರ್ಥಿಕವಾಗಿ ಮತ್ತಷ್ಟು ಬಡತನವನ್ನು ಅನುಭವಿಸುವ ಸ್ಥಿತಿಯನ್ನು ಈ ಪುರೋಹಿತ ವರ್ಗ ಮಾಡುತ್ತಾ ಬಡವರನ್ನು ಆರ್ಥಿಕವಾಗಿ ಮತ್ತಷ್ಟು ಬಡವರನ್ನಾಗಿಸುವುದು ಕಂಡುಬರುತ್ತದೆ.

'ದೇವರ ಹೆಣ' ಎಂಬ ಕಥೆಯಲ್ಲಿ ಆರ್ಥಿಕ ಬಡತನದಿಂದಾಗಿ ಬೇಸತ್ತ ಜನರ ಒಂದು ವಿಶಿಷ್ಟ ಬದುಕಿನ ಚಿತ್ರಣವನ್ನು ಈ ಕಥೆಯಲ್ಲಿ ನಿರೂಪಣೆಯಾಗಿದೆ. ಈ ಕಥೆಯ ಆರಂಭ ತೊಣ್ಣಿಯ ಹಸಿವಿನ ಚಿತ್ರಣದ ಮೂಲಕ ಆರಂಭವಾಗುತ್ತದೆ. ಆರ್ಥಿಕ ಪರಿಸ್ಥಿತಿಯ ದುಸ್ಥಿತಿ ಹಾಗೂ ಹಸಿವು ಅವನನ್ನು ಯಾವ ಹಂತಕ್ಕೆ ಕರೆದೊಯ್ಯುತ್ತದೆ ಎಂಬುದನ್ನು ಈ ಕತೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ತೊಣ್ಣಿ ಆರ್ಥಿಕವಾಗಿ ಬಡವ, ಒಂದು ಹೊತ್ತಿನ ಕೂಳಿಗಾಗಿ ಪರಿತಪಿಸುತ್ತಿದ್ದನು. ಗೌಡರ ಎತ್ತು ಸತ್ತಿರುವ ವಿಷಯ ಅವನಿಗೆ ಪರಮಾನಂದ ತರುವಂತಹ ವಿಷಯವಾಗಿರುತ್ತದೆ. ಕಾರಣ ಅದನ್ನು ತಂದು ತಿನ್ನಬಹುದೆಂದು. ಆದರೆ ಮನೆಯ ಎತ್ತನ್ನು ತಿನ್ನಲು ಕೊಡಬಾರದೆಂಬುದು ಗೌಡರ ಹಠ. ಆದರೂ ತೊಣ್ಣಿಯ ಹಸಿವಿನ ಮುಂದೆ ಗೌಡರ ಹಠವು ನಿಷ್ಪ್ರಯೋಜಕವಾಗುತ್ತದೆ. ತೊಣ್ಣಿಯು ಹೂಳಿಟ್ಟ ಎತ್ತನ್ನು ತೆಗೆದು ತಿಂದು ಗೌಡರಿಗೆ ತಿಳಿದು ಅವರು ಪೊಲೀಸರಿಗೆ ಬರಹೇಳಿದಾಗ ಅಲ್ಲಿ ತೊಣ್ಣಿಯ ಹಸಿವಿನ ಹಾಹಾಕಾರ ಕಂಡು ಪೊಲೀಸರೇ ಹೊರಟುಹೋಗುತ್ತಾರೆ. ಈ ಕಥೆಯ ಕೇಂದ್ರ ಪಾತ್ರ ತೊಣ್ಣಿ. ಒಂದು ವಿಶಿಷ್ಟವಾದ ಲಕ್ಷಣವನ್ನು ಹೊಂದಿರುವ ವ್ಯಕ್ತಿಯ ನೆಲೆಗಟ್ಟಿನಲ್ಲಿ ಹಾಗೂ ಅವನ ನಡವಳಿಕೆಯ ಜೊತೆಯಲ್ಲಿ ಶಿಷ್ಟ ಸಮಾಜದ ಸರಿ ತಪ್ಪುಗಳನ್ನು ಬಹಿರಂಗಪಡಿಸುವ ರೀತಿ ಮನಮುಟ್ಟುವಂತಿದೆ. ಸತ್ಯವನ್ನು ಬಿಚ್ಚಿ ತೋರಿಸುವಲ್ಲಿ ಓದುಗರನ್ನು ಆಶ್ಚರ್ಯಪಡಿಸುತ್ತದೆ. ಪುಣ್ಯಕ್ಕೆ ಎತ್ತು ಸತ್ತಿದೆ ಎಂದು ರೋಮಾಂಚನಗೊಂಡ ತೊಣ್ಣಿ ಎತ್ತಿನ ಮಾಂಸ, ತೊಗಲು ತನಗೆ ಸಿಕ್ಕಿಬಿಟ್ಟಿತೆಂದೇ ನಿರೀಕ್ಷೆಯಿಂದ ಕೇಳಿದಾಗ ಗೌಡರು ನಿಂಗೆ ಕೊಡೋಕೆ ಸತ್ತಿರೋದು ಅಗಸ್ರ ಕತ್ತಿ ಅಲ್ಲಲೇ ಮನಿಯ ಎತ್ತು, ಅದ್ನ ನಿನ್ ಕೈಗೊಪ್ಸಿ ನಾನ್ಯಾವ ಕರ್ಮಕ್ಕೋಗ್ಲಿ ಎಂದು ಬಿಡುತ್ತಾರೆ. ಗೌಡರ ಎತ್ತು ಸಾಯಲೆಂದು ದೇವರಿಗೆ ಪ್ರಾರ್ಥನೆ ಸಲ್ಲಿಸಿ ತನ್ನ ಜಾತಿಗೆ ಸಹಜವಾದ ಅಪೇಕ್ಷೆ ನಿರೀಕ್ಷೆಗಳನ್ನು ಇಟ್ಟುಕೊಂಡು ಬಂದಿದ್ದ ತೊಣ್ಣಿ ತನ್ನ ಆರ್ಥಿಕ ಸಮಸ್ಯೆ ಒಂದು ಪರಿಹಾರ ಸಿಕ್ಕಿಯೇ ಬಿಟ್ಟಿತೆಂದು ಬಂದಿದ್ದ ತೊಣ್ಣಿ **"ಕೈಲೋ ಆಕ್ಕೈತಿ ಕೆಯ್ಯೊಳ್ತೀವಿ, ಅದಕ್ಯಾಕೆ ಗೌಡ ನರ ಅರಕೋ ಬೇಕು"**[2] ಎಂದು ಗುನುಗುವಾಗ ಸತ್ತಿರೋ ಎತ್ತು ಕೊಡಿಸ್ರಪ್ಪೋ... ಆ ಎತ್ತು ನಾಳೆ ನಿಮ್ಗೂ ಆಯ್ತದೆ... ಇಂಗಾದ್ರೆ ಒಕ್ಕಲಿಗರ ವಕ್ಕಲು ಮಣ್ತಿನ್ನ ಬೈಕಾಯ್ತದ್ರಪೋ ಎಂದು ನಿವೇದಿಸಿಕೊಳ್ಳುವುದು ಮಾರ್ಮಿಕವಾಗಿದೆ. ಬದುಕಿರೋವರೆಗೂ ನಿಮ್ದು ಸತ್ಮ್ಯಾಕೆ ನಮ್ದು ಇದು ಮಾನ ಮರುವಾದಿ ಪ್ರಶ್ನೆ ಎಂದೆಲ್ಲಾ ಹಲುಬುವ ತೊಣ್ಣಿ ವ್ಯವಸ್ಥೆಯ ಮೂಲಭೂತ ಬದಲಾವಣೆಯನ್ನು ಬಯಸುತ್ತಿಲ್ಲ. ತಾನು ಒಂದು ಭಾಗವಾಗಿರುವ ರೂಢಿಗತ ವ್ಯವಸ್ಥೆಯಲ್ಲಿ ತನ್ನ ಹಿತಾಸಕ್ತಿಗಳು ಏರುಪೇರಾಗಿರುವುದನ್ನು ವಿರೋಧಿಸುತ್ತಿದ್ದಾನೆ ಅಷ್ಟೇ. ಏಕೆಂದರೆ ಅದು ಅವನ ಅಸ್ತಿತ್ವದ

ಪ್ರಶ್ನೆಯಾಗಿದೆ. ಹೀಗಾಗಿ ಅವನು ನಡುರಾತ್ರಿ ಸ್ಮಶಾನಕ್ಕೆ ಹೋಗಿ ಹೂಳಲಾಗಿದ್ದ ಎತ್ತಿನ ಹೆಣವನ್ನು ಕದ್ದುಕೊಂಡು ಬರುವ ಕ್ರಿಯೆ ಕೂಡ ಒಪ್ಪಿಕೊಂಡು ಬಂದ ವ್ಯವಸ್ಥೆಯೊಂದರ ಧಿಕ್ಕಾರವೇ ಆಗುತ್ತದೆ.

ಗೌಡರು ಪೊಲೀಸರನ್ನು ಕರೆತಂದರು. ಕೊಣ್ಣಿಯು ಆ ಸಂದರ್ಭದಲ್ಲಿ ಪೊಲೀಸರಿಗೆ ತನ್ನನ್ನು ಜೈಲಿಗೆ ಕರೆದುಕೊಂಡು ಹೋಗಿ ಎಂದು ಹಠ ಹಿಡಿಯುತ್ತಾನೆ. ಇದು ಅವನ ಆರ್ಥಿಕ ಬಡತನದಿಂದಾಗಿ ನೊಂದು ಬೇಸತ್ತ ಜೀವನದ ಒಂದು ಅಸಹಾಯಕ ಸ್ಥಿತಿಯ ಘಟ್ಟವನ್ನು ಅಭಿವ್ಯಕ್ತಿಸುತ್ತದೆ. ಅಲ್ಲಿನ ವ್ಯವಸ್ಥೆಯ ವ್ಯಂಗ್ಯವನ್ನು ತಿಳಿಸುವಂತೆ ಮಾಡುತ್ತದೆ. ಕತೆಯ ಅಂತ್ಯ ತನ್ನ ವ್ಯಂಗ್ಯದಿಂದ ಇಡೀ ವ್ಯವಸ್ಥೆಯನ್ನು ತಮಾಷೆ ಮಾಡುತ್ತ ಹಾಗೆ ಮಾಡುತ್ತಲೇ ನಿರಾಕರಿಸುವ ರೀತಿ ಅದ್ಭುತವಾಗಿದೆ. ಹೀಗೆ ಬಂಡಾಯದ ವ್ಯಕ್ತ ಆಶಯ ಇಲ್ಲದಿದ್ದರೂ ದೇವರ ಹೆಣ ಒಂದು ಉತ್ತಮ ಕಥೆಯಾಗಿದೆ.

ಕೊರಡ್ಕಲ್ ಶ್ರೀನಿವಾಸರಾವ್ ಅವರ ದನಿಯರ ಸತ್ಯನಾರಾಯಣ ಎಂಬ ಕಥೆಯಲ್ಲಿ ಬಡತನದ ಮನಕರಗುವ ಚಿತ್ರಣವು ಕಂಡುಬರುತ್ತದೆ. ಬೂದ ತುಕ್ರಿ ಎಂಬ ಎರಡು ಮುಗ್ದ ಬಡಮಕ್ಕಳು ಇಲ್ಲಿ ಕೇಂದ್ರಬಿಂದುವಾಗಿದ್ದರೆ, ಬೂದ ಮತ್ತು ತುಕ್ರಿ ತನ್ನ ತಾಯಿಯ ಜೊತೆ ಮಾವನ ಮನೆಗೆ ಹಬ್ಬಕ್ಕೆ ಹೋಗಿರುತ್ತಾರೆ. ಅಲ್ಲಿ ಅವರ ಅಜ್ಜಿ ಅವರಿಗೆ ಬಾಳೆಹಣ್ಣನ್ನು ಕೊಡುತ್ತಾರೆ. ಜಾತ್ರೆಯಲ್ಲಿ ಆ ಮಕ್ಕಳು ಬಾಳೆ ಗೊನೆಯನ್ನು ನೋಡಿದರೆ ಹೊರತು ಅದನ್ನು ತಿಂದಿರಲಿಲ್ಲ. ಜಾತ್ರೆಗೆ ಹೋದಲ್ಲಿ ಒಂದೆರಡು ಮಂಡಕ್ಕಿಯುಂಡೆ, ಚಕ್ಕಲಿಗಳಿಗಿಂತ ಹೆಚ್ಚಿನದೇನನ್ನು ಕೊಂಡುಕೊಳ್ಳುವಷ್ಟು ಕಡುಬಡತನ ಆರ್ಥಿಕ ಬಡತನವನ್ನು ಕಾಣಬಹುದು. ಅವರು ಒಂದು ಕಥೆಯನ್ನು ಅಜ್ಜಿಯ ಬಳಿ ಕೇಳಿಕೊಳ್ಳುತ್ತಾರೆ. ಬಾಳೆ ಕಂದು ನೆಟ್ಟು ಬೆಳೆದ ಹಂತವನ್ನು ವಿವರಿಸುತ್ತಾರೆ. ಅದರ ಮೇಲೆ ಆಸೆಯನ್ನು ಹೊಂದಿದ ಆ ಮಕ್ಕಳು ಅವರ ಮಾವನನ್ನು ಕೇಳಿದಾಗ ಕೊಡುವುದಾಗಿ ಒಪ್ಪಿಕೊಂಡಾಗ ಅವರಿಗಾದ ಸಂತೋಷ ಅಷ್ಟಿಷ್ಟಲ್ಲ. ತಮ್ಮ ಗುಡಿಸಲು ಸೇರಿದ ಆ ಮಕ್ಕಳು ಎಲ್ಲರಿಗಿಂತ ಮೊದಲು ಎಚ್ಚೆತ್ತು ತೌಡನನ್ನು ಕಾಡಿ ಬೇಡಿ ಅದನ್ನು ನಡೆಸಿದರು. ತೌಡನೂ ದಿನಗೂಲಿ ಮಾಡಿ ಸಂಸಾರ ನಡೆಸುವ ಕಡುಬಡವ. ಆದರೆ ಇರಲಿಕ್ಕೊಂದು ಮಾಡು ಬೇಕಲ್ಲ. ಅದಕ್ಕಾಗಿ ಗೌಡರ ಜಾಗದಲ್ಲೇ ಆ ಬಾಳೆಗೊನೆಯನ್ನು ನೆಡುತ್ತಾನೆ. ಅಂದಿನಿಂದ ಬುದ ತುಕ್ರಿಯರು ಹೊತ್ತಾರೆ ಎದ್ದು ಮೊದಲು ನೋಡುತ್ತಿದ್ದುದು ಆ ಕಂದನ್ನು, ಇದು ಅವರು ಆ ಗೊನೆಯ ಮೇಲೆ ಇಟ್ಟಿದ್ದ ಪ್ರೀತಿಯನ್ನು ತಿಳಿಸುತ್ತದೆ. ಹಾಗೂ ಬಾಳೆ ಹಣ್ಣನ್ನು ತಿನ್ನದಂತಹ ಕಡುಬಡತನದಲ್ಲಿ ಬೆಳೆದ ವಾತಾವರಣ ಇಲ್ಲಿ ನಿರೂಪಿತವಾಗಿದೆ. ಬಾಳೆಗೊನೆಯು ಬಲಿಯಿತು. ಗೇಣಿಯ ಬಾಕಿಯನ್ನು ತೌಡ ನೀಡಿರುವುದಿಲ್ಲ. ಇದರಿಂದ ಗೌಡನು ತೌಡನ ಮೇಲೆ ಸಿಟ್ಟಾದಾಗ ತೌಡನು ತೀರಿಸುವುದಾಗಿ ಹೇಳುತ್ತಾನೆ. ಆರ್ಥಿಕವಾಗಿ ಬಡತನವನ್ನು ಗೌಡರ ಶ್ರೀಮಂತಿಕೆಯ ದರ್ಪದಿಂದಾಗಿ ಶೋಷಣೆಗೆ ಒಳಗಾಗಲು ಬಡಜನರ ಗುಂಪಿಗೆ ತೌಡನ ಕುಟುಂಬವು ಸೇರಿರುತ್ತದೆ. ಗೌಡ ದಾರಿಯಲ್ಲಿ ಆ ಬಾಳೆಗೊನೆಯನ್ನು ನೋಡುತ್ತಾನೆ. ಅದನ್ನು ಸತ್ಯನಾರಾಯಣ ಪೂಜೆಗೆ ತಂದುಕೊಡು ಎಂದಾಗ ತೌಡ ನಿಜ ಸಂಗತಿ ಹೇಳಿದಾಗ ದನಿಯರು **"ಮಕ್ಕಳಿಗೆ ರಸಬಾಳೆ ಹಣ್ಣೋ, ಮಣ್ಣೋ! ದೇವರ ಬಾಯಿಗೆ ಬೀಳಲಿ! ಮಕ್ಕಳ ಮೈಕೈ ಸುಖ ಕೊಡುತ್ತಾನೆ, ಸತ್ಯನಾರಾಯಣ! ಮಕ್ಕಳಿಗಿಟ್ಟುಕೊಂಡು ದೇವರಿಗೆ ಕೊಡೋದಕ್ಕೆ ಹಿಂದೆ ಮುಂದೆ ನೋಡುವೆಯಾ? ಹೀಗೆಲ್ಲ ಮಾಡೋದ್ರಿಂದ್ಲೆ ನಿತ್ಯ ದರಿದ್ರ ತಪ್ಪೋದಿಲ್ಲ ನಿಮಗೆಲ್ಲ"[7]** ಎನ್ನುತ್ತಾ ತಿರುಗಿ ಕೆಂಪೇರತೊಡಗಿದರು. ಇಲ್ಲಿ

ದೇವರು ಮುಖ್ಯ. ಹಸಿದ ಜೀವಗಳಲ್ಲ ಎಂಬುದು ಇದರ ವಾದವಾಗಿದೆ. ಆರ್ಥಿಕವಾಗಿ ಶೋಷಿತವಾಗುವ ಈ ತೌಡನು ಗೇಣಿಯ ವಿಚಾರಾಗಿಯು ಆರ್ಥಿಕವಾಗಿ ಶೋಷಿತರನ್ನಾಗಿ ಮಾಡುವಂತಹ ಜನರನ್ನು ನಾವಿಲ್ಲಿ ಕಾಣುತ್ತೇವೆ.

ಈ ಎಲ್ಲಾ ಕಥೆಗಳಲ್ಲೂ ಆರ್ಥಿಕವಾಗಿ ಹೇಗೆ ಬಡತನ ವ್ಯಕ್ತವಾಗಿದೆ ಎಂಬುದನ್ನು ಈ ಕಥೆಗಳಲ್ಲಿ ಕಾಣಲಾಗುತ್ತದೆ. ಆರ್ಥಿಕ ಬಡತನ ಎಂದರೆ ಕೇವಲ ಹಣ ತೊಂದರೆಯನ್ನು ಗುರಿಯಾಗಿಸಿ ಇಲ್ಲಿ ವಿವರಣೆ ಮಾಡಲಾಗಿಲ್ಲ. ಇಲ್ಲಿ ಆರ್ಥಿಕ ದುಸ್ಥಿತಿಯ ಜೀವನದಲ್ಲಿ ಎಂತಹ ಪರಿಣಾಮವನ್ನು ಉಂಟುಮಾಡಿದೆ ಎಂಬುದನ್ನು ತಿಳಿಸುತ್ತಾ ಇಲ್ಲಿ ಆರ್ಥಿಕ ಬಡತನ ಈ ಕಥೆಗಳಲ್ಲಿ ನಿರೂಪಣೆಯಾಗಿದೆ.

**ಕೊನೆಟಿಪ್ಪಣಿಗಳು**

1. ಲಕ್ಕಪ್ಪಗೌಡ, ಹೆಚ್.ಜೆ. (2003). *ಸಾಹಿತ್ಯ ಬಹುಮುಖಿ ಚಿಂತನೆ.* ಪು. 140
2. ಶ್ಯಾಮರಾಯ ತ.ಸು. (2006). *ಕನ್ನಡ ಸಾಹಿತ್ಯ ಚರಿತ್ರೆ, (ಪರಿಷ್ಕೃತ ವಿಸ್ತೃತ ಮುದ್ರಣ).* ಪು. 241
3. ಪುರುಷೋತ್ತಮ ಬಿಳಿಮಲೆ. (1999). ಬಂಡಾಯ ದಲಿತ ಸಾಹಿತ್ಯ. ಪು. 65
4. ರಾಮಚಂದ್ರಪ್ಪ, ಎ.ಬಿ. (2002). ಬಂಡಾಯ ಕಥೆಗಳಲ್ಲಿ ದಲಿತ ಸಂವೇದನೆ, ಬಂಡಾಯ ಸಾಹಿತ್ಯ ಸಂವೇದನೆ, (ಸಂ.) ರಂಗರಾಜ ವನದುರ್ಗ. ಪು. 62
5. ಬರಗೂರು ರಾಮಚಂದ್ರಪ್ಪ. (1998). ಮುನ್ನುಡಿ ಹಬ್ಬ ಮತ್ತು ಬಲಿ, ಬಿ.ಟಿ. ಲಲಿತಾನಾಯಕ್. (ಸಂ) ಪು. 1–9
6. ಘಟಿ ಎಂ.ಎಸ್. *ಕನ್ನಡ ಮಹಿಳಾ ಸಾಹಿತ್ಯ ಒಂದು ಅಧ್ಯಯನ*
7. ಕಾಳಗೌಡ ನಾಗವಾರ. (ಸಂ.). ಜೀವನ ಪ್ರೇಮ, ಪು. 214